RAVIPRAKASH TIPPANNA AVIN
Digitally signed by RAVIPRAKASH TIPPANNA AVIN
Date: 2026.04.04 11:40:25 +0530

# 3 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ

## ಸಿ.ಸಿ. ಸಂಖ್ಯೆಃ 1931/2022

## ದಿನಾಂಕಃ 28 ನೇ ಮಾರ್ಚ್ 2026

ಉಪಸ್ಥಿತರುಃ ಶ್ರೀ ರವಿಪ್ರಕಾಶ್ ಟಿ ಆವಿನ್, ಬಿ.ಬಿ.ಎ., ಎಲ್.ಎಲ್.ಎಮ್,
3 ನೇ ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಕನಕಪುರ.

**ಫಿರ್ಯಾದುದಾರರು : ಸಾತನೂರು ಪೊಲೀಸ್ ಠಾಣೆ**

**(ಸರ್ಕಾರಿ ಸಹಾಯಕ ಅಭಿಯೋಜಕರವರಿಂದ)**

**ವಿರುದ್ಧ**

**ಆರೋಪಿತರು :**

1. ಗಿರೀಶ್ ಎಂ.ಆರ್
ಬಿನ್ ರಾಮೇಗೌಡ,
ವಯಸ್ಸು 32 ವರ್ಷಗಳು,

2. ರಾಮಚಂದ್ರೇಗೌಡ,
ಬಿನ್ ತಮ್ಮೇಗೌಡ,
ವಯಸ್ಸು 62 ವರ್ಷಗಳು,

3. ಸಣ್ಣಮ್ಮ
ಕೋಂ ರಾಮಚಂದ್ರೇಗೌಡ,
ವಯಸ್ಸು 62 ವರ್ಷಗಳು,

ಎಲ್ಲರ ವಾಸಃ
ಮಳೂರು ಪಟ್ಟಣ ಗ್ರಾಮ,

ಕಸಬಾ ಹೋಬಳಿ,
ಚನ್ನಪಟ್ಟಣ ತಾಲ್ಲೂಕು.
ರಾಮನಗರ ಜಿಲ್ಲೆ.

**(ಶ್ರೀ ಎಲ್.ಎ, ವಕೀಲರವರಿಂದ )**

| | | |
|---|---|---|
| 1 | ಘಟನೆ ನಡೆದ ದಿನಾಂಕ | : 12.06.2020 ರಿಂದ 21.04.2022 |
| 2 | ಘಟನೆ ವರದಿ ಮಾಡಿದ ದಿನಾಂಕ | : 24.04.2022 |
| 3 | ಪಿರ್ಯಾದುದಾರರ ಹೆಸರು | : ರಂಜಿತ |
| 4 | ವಿಚಾರಣೆ ಪ್ರಾರಂಭವಾದ ದಿನಾಂಕ | : 13.03.2026 |
| 5 | ವಿಚಾರಣೆ ಮುಕ್ತಾಯವಾದ ದಿನಾಂಕ | : 13.03.2026 |
| 6 | ಆರೋಪಿಸಲ್ಪಟ್ಟ ಅಪರಾಧಗಳು | :ಭಾರತೀಯ ದಂಡ ಸಂಹಿತೆಯ ಕಲಂ 498(ಎ), 504, 506 ರೆ/ವಿ 34 ಮತ್ತು ವರದಕ್ಷಿಣೆ ನಿಷ್ಷೇಧ ಕಾಯಿದೆ ಕಲಂ. 3 ಮತ್ತು 4 |
| 7 | ತೀರ್ಪು ಉದ್ಘೋಷಣೆ ಮಾಡಿದ ದಿನಾಂಕ | : 28.03.2026 |
| 8 | ನ್ಯಾಯಾಧೀಶರ ಅಭಿಪ್ರಾಯ | : ಆರೋಪಿತರನ್ನು ಅಪರಾಧಗಳಿಂದ ದೋಷ ಮುಕ್ತಗೊಳಿಸಿದೆ. |

**:ತೀರ್ಪು::**

ಪೊಲೀಸ್ ಇನ್ಸ್ ಪೆಕ್ಟರ್, ಕನಕಪುರ ವೃತ್ತ, ಕನಕಪುರ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 498(ಎ), 504, 506 ರೆ/ವಿ 34 ಮತ್ತು ವರದಕ್ಷಿಣೆ ನಿಷ್ಷೇಧ ಕಾಯಿದೆ ಕಲಂ. 3 ಮತ್ತು 4 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ :**

ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ಸಾತನೂರು ಪೊಲೀಸ್ ಠಾಣಾ ವ್ಯಾಪ್ತಿ ಸರಹದ್ದು, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ದಾಳಿಂಬ ಗ್ರಾಮದ ವಾಸಿಯಾದ ಚಾಸಾ-1 ರವರನ್ನು 1 ನೇ ಆರೋಪಿ ಮದುವೆ ಮಾಡಿಕೊಳ್ಳಲು 30 ಗ್ರಾಂ ಚಿನ್ನದ ಮಾಂಗಲ್ಯ ಸರ, 2 ಗ್ರಾಂ ತೂಕದ 2 ಚಿನ್ನದ ಕಾಸು, 2 ಗ್ರಾಂ ತೂಕದ 4 ಚಿನ್ನದ ಗುಂಡು, 5 ಗ್ರಾಂ ತೂಕದ ತಾಳಿಯನ್ನು ಹಾಗೂ 20 ಗ್ರಾಂ ತೂಕದ ಚಿನ್ನದ ಚೈನು ಮತ್ತು 10 ಗ್ರಾಂ ತೂಕದ ಉಂಗುರವನ್ನು ವರದಕ್ಷಿಣೆಯಾಗಿ ಪಡೆದುಕೊಂಡು ಮತ್ತು ದಿನಾಂಕಃ 12.06.2020 ರಂದು ಚನ್ನಪಟ್ಟಣ ತಾಲ್ಲೂಕು, ಮಳೂರು ಪಟ್ಟಣದ ಗ್ರಾಮದ ಚೌಡೇಶ್ವರಿ ದೇವಸ್ಥಾನದಲ್ಲಿ ವಿವಾಹ ಮಾಡಿಕೊಂಡಿದ್ದು, ಮದುವೆಯಾದ ನಂತರ ಹೆಚ್ಚಿನ ವಡವೆಗಳು ಮತ್ತು *1* ಲಕ್ಷ ವರದಕ್ಷಿಣೆ ಹಣ ತರುವಂತೆ *1* ರಿಂದ *3* ನೇ ಆರೋಪಿಗಳು ಚಾಸಾ-*1*/ರಂಜಿತ ರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ, ಅವಾಚ್ಯ ಶಬ್ದಗಳಿಂದ ಬೈದಿದುದ ಹಾಗೂ ದಿನಾಂಕಃ *21.04.2022* ರಂದು *1* ಮತ್ತು *2* ನೇ ಆರೋಪಿಗಳು ದಾಳಿಂಬ ಗ್ರಾಮದ ಚಾಸಾ-*1*/ರಂಜಿತ ರವರ ತಾಯಿಯ ಮನೆಗೆ ಬಂದು ಮನೆಯಲ್ಲಿದ್ದ ಚಾಸಾ-*1*/ರಂಜಿತ ಮುತ್ತ ಚಾಸಾ-*2*/ರಮ್ಯ ಅವಾಚ್ಯ ಶಬ್ದಗಳಿಂದ ನಿಂದಿಸಿ, ಬೆದರಿಕೆಯನ್ನು ಹಾಕಿರುತ್ತಾರೆಂದು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 498(ಎ), 504, 506 ರೆ/ವಿ 34 ಮತ್ತು ವರದಕ್ಷಿಣೆ ನಿಷ್ಷೇಧ ಕಾಯಿದೆ ಕಲಂ. 3 ಮತ್ತು 4 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**3.** ಆರೋಪಿತರು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದು, ಅವರಿಗೆ ದಂಡ ಪ್ರಕ್ರಿಯ ಸಂಹಿತೆ ಕಲಂ 207 ರಡಿಯಲ್ಲಿ ಅಭಿಯೋಜನೆಯ ಪರ ದಾಖಲೆಗಳನ್ನು ಒದಗಿಸಲಾಗಿರುತ್ತದೆ.

**4.** ಭಾರತೀಯ ದಂಡ ಸಂಹಿತೆಯ ಕಲಂ 498(ಎ), 504, 506 ರೆ/ವಿ 34 ಮತ್ತು ವರದಕ್ಷಿಣೆ ನಿಷ್ಠೇಧ ಕಾಯಿದೆ ಕಲಂ. 3 ಮತ್ತು 4 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ. ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ, ಆರೋಪಿತರಿಗೆ ಓದಿ ಹೇಳಿದ್ದು ಅವರು ಅದನ್ನು ಅಲ್ಲಗಳೆದಿದ್ದರಿಂದ ವಿಚಾರಣೆಗೆ ಮುಂದೂಡಲಾಯಿತು.

**5.** ಅಭಿಯೋಜನೆಯು ದೋಷಾರೋಪಣೆ ಪಟ್ಟಿಯ 10 ಸಾಕ್ಷಿದಾರರಲ್ಲಿ, ಇಬ್ಬರು ಸಾಕ್ಷಿದಾರರನ್ನು ಮಾತ್ರ ಪ್ರಾ.ಸಾ-1 ಮತ್ತು 2 ಎಂಬುದಾಗಿ ವಿಚಾರಣೆಗೊಳಪಡಿಸಿರುತ್ತದೆ. ವಿಚಾರಣೆ ಮಾಡಿ 5 ದಾಖಲೆಗಳನ್ನು ನಿಶಾನೆ.ಪಿ-1 ರಿಂದ ನಿಶಾನೆ.ಪಿ-5 ಎಂದು ಗುರುತಿಸಲಾಗಿದೆ.

**6.** ಅಭಿಯೋಜನೆಯ ಪಕ್ಷದ ಪ್ರಕರಣಕ್ಕೆ ಪೂರಕವಾಗಿ ಪ್ರಾ.ಸಾ-1 ಮತ್ತು 2 ರವರು ನುಡಿಯದೇ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಆರೋಪಿತರ ವಿರುದ್ದ ಯಾವುದೇ ಸಾಕ್ಷ್ಯವು ದೊರೆಯದಿದ್ದ ಕಾರಣ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ದಾಖಲಿಸುವ ಹೇಳಿಕೆಯನ್ನು ವಿನಾಯಿತಿ ನೀಡಲಾಯಿತು.

**7.** ವಾದವನ್ನು ಆಲಿಸಲಾಯಿತು, ದಾಖಲೆಗಳನ್ನು ಪರಿಶೀಲಿಸಲಾಯಿತು.

**8.** ಅಭಿಯೋಜಕರು ಹಾಜರು ಪಡಿಸಿದ ಸಾಕ್ಷ್ಯಗಳ ಹೇಳಿಕೆಗಳನ್ನು, ನಿಶಾನೆಯಾಗಿ ಗುರುತಿಸಿಕೊಂಡಿರುವ ದಾಖಲಾತಿಗಳನ್ನು ಮತ್ತು ಉಭಯ

ವಕೀಲರು ಮಂಡಿಸಿದ ವಾದ ವಿವಾದದ ಮೇರೆಗೆ ಪರಿಗಣನೆಗೆ ಉಬ್ಧವಿಸುವ ಅಂಶಗಳು ಯಾವುವೆಂದರೆ;

**ಅಂಶ 1.** ಸಾತನೂರು ಪೊಲೀಸ್ ಠಾಣಾ ವ್ಯಾಪ್ತಿ ಸರಹದ್ದು, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ದಾಳಿಂಬ ಗ್ರಾಮದ ವಾಸಿಯಾದ ಚಾಸಾ-1 ರವರನ್ನು 1 ನೇ ಆರೋಪಿ ಮದುವೆ ಮಾಡಿಕೊಳ್ಳಲು 30 ಗ್ರಾಂ ಚಿನ್ನದ ಮಾಂಗಲ್ಯ ಸರ, 2 ಗ್ರಾಂ ತೂಕದ 2 ಚಿನ್ನದ ಕಾಸು, 2 ಗ್ರಾಂ ತೂಕದ 4 ಚಿನ್ನದ ಗುಂಡು, 5 ಗ್ರಾಂ ತೂಕದ ತಾಳಿಯನ್ನು ಹಾಗೂ 20 ಗ್ರಾಂ ತೂಕದ ಚಿನ್ನದ ಚೈನು ಮತ್ತು 10 ಗ್ರಾಂ ತೂಕದ ಉಂಗುರವನ್ನು ವರದಕ್ಷಿಣೆಯಾಗಿ ಪಡೆದುಕೊಂಡು ಮತ್ತು ದಿನಾಂಕಃ 12.06.2020 ರಂದು ಚನ್ನಪಟ್ಟಣ ತಾಲ್ಲೂಕು, ಮಳೂರು ಪಟ್ಟಣದ ಗ್ರಾಮದ ಚೌಡೇಶ್ವರಿ ದೇವಸ್ಥಾನದಲ್ಲಿ ವಿವಾಹ ಮಾಡಿಕೊಂಡಿದ್ದು ,ಆ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ 1961 ಕಲಂಃ 3 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ *2.*** ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ *1* ರಿಂದ *3* ನೇ ಆರೋಪಿತರು ಮದುವೆಯಾದ ನಂತರ ಹೆಚ್ಚಿನ ವಡವೆಗಳು ಮತ್ತು *1* ಲಕ್ಷ

ವರದಕ್ಷಿಣೆ ಹಣ ತರುವಂತೆ ಹೇಳಿದ್ದು, ಆ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ *1961* ಕಲಂಃ *4* ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ *?*

**ಅಂಶ 3.** ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ *1* ರಿಂದ *3*ನೇ ಆರೋಪಿತರು ಮದುವೆಯಾದ ನಂತರ ಹೆಚ್ಚಿನ ವಡವೆಗಳು ಮತ್ತು *1* ಲಕ್ಷ ವರದಕ್ಷಿಣೆ ಹಣ ತರುವಂತೆ *1* ರಿಂದ *3*ನೇ ಆರೋಪಿಗಳು ಚಾಸಾ-*1/*ರಂಜಿತ ರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 498(ಎ) ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 4.** ದಿನಾಂಕಃ *21.04.2022* ರಂದು ಮಧ್ಯಾಹ್ನ *2.00* ಗಂಟೆ ಸಮಯದಲ್ಲಿ, ಚಾಸಾ-*1/*ರಂಜಿತ ರವರು ತನ್ನ ತವರು ಮನೆಯಲ್ಲಿದ್ದಾಗ, *1* ರಿಂದ *3*ನೇ ಆರೋಪಿಗಳಾದ ನೀವು ಅ ಅಪರಾಧ ಮಾಡುವ ಸಮಾನ ಉದ್ದೇಶದಿಂದ, *1* ಮತ್ತು *2*ನೇ ಆರೋಪಿತರಾದ ನೀವು ಚಾಸಾ-*1* ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಂಧನೆ ಮಾಡಿರುತ್ತೀರಿ, ಆ

ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 504 ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 5.** ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-*1/*ರಂಜಿತ ಮತ್ತು ಚಾಸಾ-*2/*ರಮ್ಯ ರವರಿಗೆ ಬೆದರಿಕೆಯನ್ನು ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 506 ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 6.** ಯಾವ ಆದೇಶ ?

**9.** ಈ ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಗಿನಂತಿದೆಃ

**ಅಂಶ-1 : ನಕಾರಾತ್ಮಕವಾಗಿ**
**ಅಂಶ-2 : ನಕಾರಾತ್ಮಕವಾಗಿ**
**ಅಂಶ-3 : ನಕಾರಾತ್ಮಕವಾಗಿ**
**ಅಂಶ-4 : ನಕಾರಾತ್ಮಕವಾಗಿ**
**ಅಂಶ-5 : ನಕಾರಾತ್ಮಕವಾಗಿ**
**ಅಂಶ-6 : ಅಂತಿಮ ಆದೇಶ**

# <u>ಕಾರಣಗಳು</u>

**10. ಅಂಶ-1 ರಿಂದ 5 :** ಸಂಗತಿಯ ಪುನರಾವರ್ತನೆಯನ್ನು ತಪ್ಪಿಸಲು ಹಾಗೂ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

**11.** ಅಭಿಯೋಜನೆಯು ಪ್ರಕರಣವನ್ನು ರುಜುವಾತು ಪಡಿಸಲು ತನ್ನ ಪರವಾಗಿ ಇಬ್ಬರು ಸಾಕ್ಷಿದಾರರನ್ನು ಪ್ರಾ.ಸಾ-1 ಮತ್ತು 2 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ.

**12.** ಪ್ರಾ.ಸಾ-1 ರಂಜಿತ ರವರು ಪಿರ್ಯಾದಿ ಸಾಕ್ಷಿದಾರರಾಗಿರುತ್ತಾರೆ. ತಮ್ಮ ಮುಖ್ಯ ವಿಚಾರಣೆಯಲ್ಲಿ, ಅಭಿಯೋಜನೆಗೆ ಪೂರಕವಾಗಿ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಮತ್ತು ನಿಪಿ-1 ದೂರು, ನಿಪಿ-2 ಮತ್ತು 3 ಪಂಚನಾಮೆ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಗಲಾಟೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ನಿಪಿ-4 ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**13.** ಪ್ರಾ.ಸಾ-2 ರಮ್ಯ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಅಭಿಯೋಜನೆಗೆ ಪೂರಕವಾಗಿ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಗಲಾಟೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ನಿಪಿ-5 ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**14.** ಈ ಸಾಕ್ಷಿದಾರರ ವಿಚಾರಣೆ ಆದ ನಂತರ ಮಾನ್ಯ ಸರ್ಕಾರಿ ಅಭಿಯೋಜಕರು ದೋಷಾರೋಪಣೆ ಪಟ್ಟಿಯಲ್ಲಿ ಹೆಸರಿಸಲಾದ ಉಳಿದ ಸಾಕ್ಷಿ ದಾರರಿಗೆ ಸಮನ್ಸ್ ಹೊರಡಿಸಲು ಕೋರಿಕೊಂಡಿರುತ್ತಾರೆ. ಆದರೆ ಈ ಪ್ರಕರಣದ ಫಿರ್ಯಾದುದಾರರು ಮತ್ತು ಗಾಯಾಳುಗಳು ಸ್ವತಃ ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿಯದೆ ಇದ್ದುದರಿಂದ ಉಳಿದ ಸಾಕ್ಷಿದಾರರ ವಿಚಾರಣೆ ಮಾಡಿದರೂ ಸಹ ಅಭಿಯೋಜನೆಗೆ ಯಾವುದೇ ಪ್ರಯೋಜನ ಆಗುವುದಿಲ್ಲ ಎಂದು ತೀರ್ಮಾನಿಸಿ ಅವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಅಭಿಯೋಜನೆಯ ಪರ ಸಾಕ್ಷ್ಯವನ್ನು ಮುಕ್ತಾಯಗೊಳಿಸಿತು.

**15.** ಈ ಪ್ರಕರಣದಲ್ಲಿ ಪ್ರಮುಖವೆಂದು ಹೇಳಲಾದ ವ್ಯಕ್ತಿಗಳು ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲವಾದ್ದರಿಂದ ಅಭಿಯೋಜನೆಯು ಈ ಪ್ರಕರಣದಲ್ಲಿ ಯಾವುದೇ ಹುರುಳು ಇಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಆರೋಪಿತರ ವಿರುದ್ಧ ಹೊರಿಸಲಾದ

ಆರೋಪಗಳು ಕೇವಲ ಆರೋಪಗಳಾಗಿಯೇ ಉಳಿಯುತ್ತವೇ ವಿನಃ ಯಾವುದೇ ಸಾಕ್ಷ್ಯಾಧಾರಗಳಿಂದ ರುಜುವಾತು ಆಗಿರುವುದಿಲ್ಲ.

**16.** ಆದ್ದರಿಂದ ಅಭಿಯೋಜನೆಯು ಆರೋಪಿತರ ವಿರುದ್ಧ ಆರೋಪಿಸಲಾದಂತಹ ಭಾರತೀಯ ದಂಡ ಸಂಹಿತೆಯ ಕಲಂ 498(ಎ), 504, 506 ರೆ/ವಿ 34 ಮತ್ತು ವರದಕ್ಷಿಣೆ ನಿಷ್ಫೇಧ ಕಾಯಿದೆ ಕಲಂ. 3 ಮತ್ತು 4 ರ ಅಪರಾಧವನ್ನು ಆರೋಪಿತರು ಮಾಡಿರುತ್ತಾರೆಂದು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದೆ ಹಾಗೂ ಅಭಿಯೋಜನೆಯು ಆರೋಪಿತರ ಮೇಲಿನ ಅಪರಾಧವನ್ನು ಎಲ್ಲಾ ಸಂಶಯಾತೀತ ಕಾರಣಗಳಿಂದ ಹೊರತುಪಡಿಸಿ ರುಜುವಾತು ಪಡಿಸಬೇಕೆಂಬುದು ಕ್ರಿಮಿನಲ್ ನ್ಯಾಯಶಾಸ್ತ್ರದ ಸಾಮಾನ್ಯ ನಿಯಮವಾಗಿದ್ದು, ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪಗಳನ್ನು ರುಜುವಾತು ಪಡಿಸುವಲ್ಲಿ ವಿಫಲವಾಗಿರುವುದರಿಂದ ಮತ್ತು ಸಂಶಯದ ಲಾಭವನ್ನು ಆರೋಪಿತರಿಗೆ ಕೊಡಬೇಕಾಗಿರುವುದು ಸಾಮಾನ್ಯ ಕಾನೂನಿನ ತತ್ವವಾಗಿರುವುದರಿಂದ ಈ ಮೇಲಿನ **ಅಂಶ-1 ರಿಂದ 5 ಗಳನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**17. ಅಂಶ-6:** ಅಂಶ-1 ರಿಂದ 5 ರಲ್ಲಿ ಹೇಳಲಾದ ಕಾರಣಗಳಿಂದಾಗಿ, ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಲು ವಿಫಲರಾಗಿರುವ ಕಾರಣ ಆರೋಪಿಗೆ ಬಿಡುಗಡೆಗೆ ಅರ್ಹರಿರುತ್ತಾರೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶವನ್ನು ಈ ನ್ಯಾಯಾಲಯ ಮಾಡುತ್ತದೆ .

**:ಆದೇಶ:**

ದಂಡ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ 1 ರಿಂದ 3 ನೇ ಆರೋಪಿತರನ್ನು ಭಾರತೀಯ ದಂಡ

ಸಂಹಿತೆಯ ಕಲಂ 498(ಎ), 504, 506 ರೆ/ವಿ 34 ಮತ್ತು ವರದಕ್ಷಿಣೆ ನಿಷ್ಬೇಧ ಕಾಯಿದೆ ಕಲಂ. 3 ಮತ್ತು 4 ರ ಆಪಾದನೆಗಳಿಂದ ದೋಷ ಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

ಆರೋಪಿತರ ವೈಯುಕ್ತಿಕ ಬಂಧ ಪತ್ರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದು ಪಡಿಸಲಾಗಿದೆ.

ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ. 437-A ರ ಅನುಸಾರ ₹50,000/- ಮೊತ್ತದ ವೈಯಕ್ತಿಕ ಬಂಧ ಪತ್ರ ಮತ್ತು ಸಮಾನ ಮೊತ್ತಕ್ಕೆ ಒಬ್ಬ ಜಾಮೀನುದಾರರೊಂದಿಗೆ ಜಾಮೀನುದಾರ ಬಂಧ ಪತ್ರ ಕೊಡತಕ್ಕದ್ದು. ಸದರಿ ಬಂಧ ಪತ್ರಗಳು ಇವತ್ತಿನಿಂದ 6 ತಿಂಗಳ ಅವಧಿಯವರೆಗೆ ಮಾನ್ಯವಾಗಿರುತ್ತವೆ.

ಅಪೀಲು ಅವಧಿ ಮುಗಿದ ನಂತರ ಪಿಎಫ್ ನಂ.184/2022 ದಿನಾಂಕ.20.07.2022 ರಡಿಯಲ್ಲಿ ಕ್ರಮ ಸಂಖ್ಯೆ ಸಂಖ್ಯೆ-1 ರಿಂದ 3 ರಡಿಯಲ್ಲಿ ಅಮಾನತ್ತು ಪಡಿಸಿಕೊಂಡಿರುವ ವಿವಾಹ ಆಹ್ವಾನ ಪತ್ರಿಕೆ, ಮದುವೆ ಕಾಲದ ನಾಲ್ಕು ಫೋಟೋಗಳು, ಮದುವೆ ಸಮಯದ ನಾಲ್ಕು ಫೋಟೋಗಳು ಇರುವ ಸಿಡಿ ಇವುಗಳನ್ನು ಅಪೀಲು ಅವಧಿ ಮುಗಿದ ನಂತರ

ಪಿರ್ಯಾಧಿಗೆ ಕೊಡಲು ಆದೇಶಿಸಿದೆ.

*(ಶೀಘ್ರಲಿಪಿಗಾರರು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ **28 ನೇ ಮಾರ್ಚ್ 2026** ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

RAVIPRAKASH TIPPANNA AVIN
Digitally signed by RAVIPRAKASH TIPPANNA AVIN
Date: 2026.04.04 11:40:39 +0530

**(ರವಿಪ್ರಕಾಶ್ ಟಿ ಆವಿನ್)**
**3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ.,ಕನಕಪುರ.**

**::ಅನುಬಂಧ::**

**1. ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ**

ಪ್ರಾಸಾ-1 : ರಂಜಿತ

ಪ್ರಾಸಾ-2 : ರಮ್ಯ

**2. ಅಭಿಯೋಜನಾ ಪರ ಹಾಜರು ಪಡಿಸಿದ ದಾಖಲೆಗಳುಃ**

ನಿಶಾನೆ ಪಿ-1 : ದೂರು

ನಿಶಾನೆ ಪಿ-1(ಎ) : ಪ್ರಾಸಾ-1 ರವರ ಸಹಿ

ನಿಶಾನೆ ಪಿ-2 : ಪಂಚನಾಮೆ

ನಿಶಾನೆ ಪಿ-2(ಎ) : ಪ್ರಾಸಾ-1 ರವರ ಸಹಿ

ನಿಶಾನೆ ಪಿ-3 : ಅಮಾನತ್ತು ಪಂಚನಾಮೆ

ನಿಶಾನೆ ಪಿ-3(ಎ) : ಪ್ರಾಸಾ-1 ರವರ ಸಹಿ

ನಿಶಾನೆ ಪಿ-4 : ಪ್ರಾಸಾ-1 ರವರ ಹೇಳಿಕೆ

ನಿಶಾನೆ ಪಿ-5 : ಪ್ರಾಸಾ-2 ರವರ ಹೇಳಿಕೆ

**3. ಆರೋಪಿ ಪರ ವಿಚಾರಣೆ  ಮಾಡಲಾದ ಸಾಕ್ಷಿಗಳುಃ**

**ಇಲ್ಲಾ**

**4. ಆರೋಪಿ ಪರ ಹಾಜರು ಪಡಿಸಿದ ದಾಖಲೆಗಳುಃ**

**ಇಲ್ಲಾ**

**5. ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೆಮಾಲುಗಳುಃ**

**ಇಲ್ಲಾ**

**(ರವಿಪ್ರಕಾಶ್ ಟಿ ಆವಿನ್)**
**3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ.,ಕನಕಪುರ.**